ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1170(1381)

ಮಾನ್ಯ ಸದಸ್ಯರ ಹೆಸರು ಶ್ರೀ ವಾಟಾಳ್ ನಾಗರಾಜು (ಚಾಮರಾಜನಗರ ಕ್ಷೇತ್ರ)

ಉತ್ತರಿಸುವ ಸಚಿವರು ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು)

ಅ) ರಾಜ್ಯದಲ್ಲಿರುವ ಸರ್ಕಾರಿ ಹೆಲಿಕಾಪ್ಟರ್‌ಗಳ ಸಂಖ್ಯೆ ಎಷ್ಟು?

ರಾಜ್ಯಸರ್ಕಾರದಲ್ಲಿ ಈಗ ಯಾವುದೇ ಹೆಲಿಕಾಪ್ಟರ್ ಇರುವುದಿಲ್ಲ

ಆ) ಬಾಡಿಗೆಗೆ ತೆಗೆದುಕೊಳ್ಳುವ ಹೆಲಿಕಾಪ್ಟರ್ ಸಂಖ್ಯೆ ಎಷ್ಟು?

ಮಾನ್ಯ ಮುಖ್ಯ ಮಂತ್ರಿಗಳು, ಮಂತ್ರಿಗಳು ಹಾಗೂ ಇತರೆ ಗಣ್ಯ ವ್ಯಕ್ತಿಗಳ ಅಧಿಕೃತ ಪ್ರವಾಸಕ್ಕಾಗಿ ವೆಟ್‌ಲೀಸ್ ಒಪ್ಪಂದದ ಪ್ರಕಾರ ಒಂದು ಹೆಲಿಕಾಪ್ಟರ್‌ನ್ನು ಹೆಚ್ ಎ ಎಲ್ ಸಂಸ್ಥೆಯವರಿಂದ ಪಡೆದುಕೊಳ್ಳಲಾಗಿದೆ ಈ ಹೆಲಿಕಾಪ್ಟರ್ ಲಭ್ಯವಿಲ್ಲದ ಪಕ್ಷದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಖಾಸಗಿ ಸಂಸ್ಥೆಯಿಂದ ಹೆಲಿಕಾಪ್ಟರ್ ಬಾಡಿಗೆಗೆ ತೆಗೆದುಕೊಳ್ಳಲಾಗುತ್ತಿದೆ

ಇ) ಹಾಗಿದ್ದಲ್ಲಿ ಎಷ್ಟು ಬಾಡಿಗೆಯನ್ನು ಪಾವತಿ ಮಾಡಲಾಗುವುದು?

ರಾಜ್ಯ ಸರ್ಕಾರವು ಹೆಚ್ ಎ ಎಲ್ ಸಂಸ್ಥೆಯಿಂದ ವೆಟ್ ಲೀಸ್ ಕರಾರಿನ ಮೇಲೆ ಪಡೆದುಕೊಂಡಿರುವ ಧೃವ್ ಹೆಲಿಕಾಪ್ಟರ್‌ಗೆ ಪ್ರತಿ ತಿಂಗಳು ರೂ 30 00ಲಕ್ಷ ಬಾಡಿಗೆ ಹಾಗೂ ಪ್ರತಿ ಗಂಟೆಯ ಹಾರಾಟಕ್ಕೆ ರೂ 20 000 ಗಳಂತೆ ಬಾಡಿಗೆ ನೀಡಲಾಗುತ್ತಿದೆ

ಖಾಸಗಿ ಸಂಸ್ಥೆಗಳಿಂದ ಹೆಲಿಕಾಪ್ಟರ್‌ಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಸಂದರ್ಭಗಳಲ್ಲಿ ಈ ಕೆಳಕಂಡಂತೆ ಬಾಡಿಗೆಯನ್ನು ನೀಡಲಾಗುತ್ತಿದೆ

ಕ್ರ ಸಂ	ಹೆಲಿಕಾಪ್ಟರ್‌ನ ಮಾದರಿ	ಪ್ರಯಾಣಿಕರ ಸಂಖ್ಯೆ	ಪ್ರತಿ ಗಂಟೆಯ ಹಾರಾಟದ ದರ (ರೂ ಗಳಲ್ಲಿ)
1	ಬೀಚ್ ಎಸ್ ಕೆ ಎ ಬಿ 200 ಟ್ವೀನ್ ಇಂಜಿನ್ ಏರ್‌ಕ್ರಾಪ್ಟ್	6 ಪ್ರಯಾಣಿಕರು	90,000–00
2	ಪೈಲಟ್ ಪಿಸಿ 12 ಪಿಂಗಲ್ ಇಂಜಿನ್ ಏರ್‌ಕ್ರಾಪ್ಟ್	9 ಪ್ರಯಾಣಿಕರು	75,000–00
3	ಬಿಲ್ ಅಂಡ್ ಬೇಲ್ ಪಿಂಗಲ್ ಇಂಜಿನ್ ಹೆಲಿಕಾಪ್ಟರ್ ಬೇಲ್	5 ಪ್ರಯಾಣಿಕರು	85,000–00

4	ಬಿಲ್ ಅಂಡ್ ಬೇಲ್ ಪಿಂಗಲ್ ಇಂಜಿನ್ ಹೆಲಿಕಾಪ್ಟರ್ ಬೇಲ್ 206 ಎಲ್ 3	4 ಪ್ರಯಾಣಿಕರು	70,000–00
5	ಟ್ವಿನ್ ಇಕ್ವಿರೆಲ್ ಎ ಎಸ್ 355 ಎಫ್ 1 ಟ್ವಿನ್ ಇಂಜಿನ್ ಹೆಲಿಕಾಪ್ಟರ್	3 ಪ್ರಯಾಣಿಕರು	85,000–00

ಈ) ಯಾರು ಯಾರಿಂದ ಹೆಲಿಕಾಪ್ಟರ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳಲಾಗುವುದು?

ಮಾನ್ಯ ಮುಖ್ಯ ಮಂತ್ರಿಯವರು ಹಾಗೂ ಇತರೆ ಗಣ್ಯ ವ್ಯಕ್ತಿಗಳ ಅಧಿಕೃತ ಪ್ರವಾಸ ಕಾರ್ಯಕ್ರಮಗಾಗಿ ಈ ಕೆಳಕಂಡ ಸಂಸ್ಥೆಗಳಿಂದ ಹೆಲಿಕಾಪ್ಟರ್‌ಗಳನ್ನು ಬಾಡಿಗೆಗೆ ತೆಗೆದು ಕೊಳ್ಳಲಾಗುತ್ತದೆ

1 ಮೆ ಹಿಂದೂಸ್ಥಾನ್ ಏರೋನಾಟಿಕ್ ಲಿಮಿಟೆಡ್, ಬೆಂಗಳೂರು (ವೆಟ್ ಲೀಸ್ ಆಧಾರದ ಮೇಲೆ)

2 ಮೆ ಡೆಕ್ಕನ್ ಏವಿಯೇಷನ್ಸ್, ಬೆಂಗಳೂರು

3 ಮೆ ಯು ಬಿ ಏರ್ ಲಿಮಿಟೆಡ್, ಬೆಂಗಳೂರು

4 ಮೆ ಇಂಡಿಯನ್ ಏರ್‌ಫೋರ್ಸ್, ರಕ್ಷಣಾ ಇಲಾಖೆ ಯಲಹಂಕ, ಬೆಂಗಳೂರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1178(1336)**
ಮಾನ್ಯ ಸದಸ್ಯರ ಹೆಸರು **ಶ್ರೀಮತಿ ಭಾಗೀರಥಿ (ಕೊಟ್ಟೂರು)**
ಉತ್ತರಿಸುವ ಸಚಿವರು **ಶ್ರೀ ಸಿ ಎಂ ಉದಾಸಿ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

1) 2004-05 ಮತ್ತು 2006–07ನೇ ಸಾಲಿನಲ್ಲಿ ಕೊಡ್ಲಿಗಿ ತಾಲ್ಲೂಕಿನ ಜಿಲ್ಲಾ ಪಂಚಾಯತ್ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಕೂಡ್ಲಗಿ ತಾಲ್ಲೂಕಿನ ಜಿಲ್ಲಾ ಪಂಚಾಯತ್ ರಸ್ತೆಗಳ ದುರಸ್ತಿಗಾಗಿ 2004–05 ಮತ್ತು 2006–07ನೇ ಸಾಲಿಗೆ ಈ ಕೆಳಗಿನಂತೆ ಹಣ ಬಿಡುಗಡೆಯಾಗಿರುತ್ತದೆ

ಕ್ರ ಸಂ	ವಿವರ	ಬಿಡುಗಡೆಯಾದ ಹಣ (ರೂ ಲಕ್ಷಗಳಲ್ಲಿ)	
		2004–05	2006–07
1	ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ–3054	41 23	109 43
2	12ನೇ ಹಣಕಾಸು (ರಸ್ತೆ ನಿರ್ವಹಣೆ		57 95